ಎಷ್ಟೋ ಪೋಷಕರಿಗೆ ಗೊತ್ತಾಗಲು ವರ್ಷಗಳೇ ಬೇಕಾದವು.

ಸಿನಿಮಾಗಳಿಗೆ ಸಾಮಾಜಿಕ ಹೊಣೆಗಾರಿಕೆಯೂ ಇರಬೇಕು ಎಂದು ತಿಳಿದವರು ಹೇಳುವುದು ಇದೇ ಕಾರಣಕ್ಕೆ. ಕಳೆದ ವರ್ಷ ತೆರೆಕಂಡ ಚೀನಾದ 'ಡೆಸ್ಟಿನಿ' ಸಿನಿಮಾ ಸಾಮಾಜಿಕ ಹೊಣೆಗಾರಿಕೆಯನ್ನು ದೊಡ್ಡ ಮಟ್ಟದಲ್ಲಿಯೇ ಅಡಗಿಸಿಟ್ಟುಕೊಂಡ ಚಿತ್ರವಾಗಿ ಮುಖ್ಯವಾಗುತ್ತದೆ. ಈ ಸಿನಿಮಾ ನೋಡಿದಾಗ 'ತಾರೆ ಜಮೀನ್ ಪರ್' ನೆನಪಾಯಿತು. ಅದು ಮರೆತ ಸಾಮಾಜಿಕ ಹೊಣೆಗಾರಿಕೆ, ಇದರಲ್ಲಿ ಅಡಿಗಡಿಗೂ ಇದೆಯೆನ್ನುವುದು ಯಾವುದೇ ಸಿನಿಮಾ ವಿದ್ಯಾರ್ಥಿಗೂ ಅರ್ಥವಾದೀತು. ಈ ವರ್ಷ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಗಮನಸೆಳೆದ ಚಿತ್ರಗಳಲ್ಲಿ ಇದೂ ಒಂದು.

'ಡೆಸ್ಟಿನಿ' ಚಿತ್ರದ ಕಥಾನಾಯಕ 'ಆಟಿಸಂ' ಸಮಸ್ಯೆ ಇರುವ ಬಾಲಕ. ಕಥಾನಾಯಕಿ ಆ ಮಗುವಿನ ತಾಯಿ. ಹೃದಯಸ್ಪರ್ಶಿ ಪೋಷಕ ಪಾತ್ರ – ಮಗುವಿನ ತಂದೆ. ನಗರ ಕೇಂದ್ರಿತ ವಸ್ತುಗಳನ್ನು ಒಳಗೊಂಡ, ಸಮಸ್ಯೆಯನ್ನೇ ಹೂರಣವಾಗಿ ಉಳ್ಳ ಚಿತ್ರಗಳು 'ಬೋರ್' ಹೊಡೆಸುವ ಅಥವಾ ಉಪದೇಶ ಮಾಡುವ ಸಂಭವವೇ ಹೆಚ್ಚು. ಆದರೆ, ನಿರ್ದೇಶಕ ಝಾಂಗ್ ವೀ ಅವರಿಗೆ ದೃಶ್ಯ ಮಾಧ್ಯಮದ ಕೌಶಲ ಸಿದ್ಧಿಸಿದೆ. ಮಿಗಿಲಾಗಿ ಅವರು ಯಾಂತ್ರಿಕ ಬದುಕಿನ ಮಾನವೀಯ ಮುಖಗಳನ್ನು ಹೆಕ್ಕಿದ್ದಾರೆ. ತಾಳ್ಮೆ ಪರೀಕ್ಷಿಸುವ ವಾತಾವರಣದಲ್ಲಿ ತಾಯಿಯೊಬ್ಬಳ ಕಕ್ಕುಲತೆಯ ಪರಮಾವಧಿಯಲ್ಲೇ ಹೋರಾಟದ ಕೆಲವು ಬಿಂದುಗಳನ್ನು



ಚಿತ್ರದ ಒಂದು ದೃಶ್ಯ